ಜಾತಿಯ ಕ್ಯಾವಿಂಡಿಶ್, ರೊಬಸ್ಟಾ, ತೀರಾ ಅಪರೂಪದ ರಸತಾಳಿ, ನೇಂದ್ರಬಾಳೆ, ಕೇಸರಿ ಬಣ್ಣದ ಪೂವನ್, ನೈನಿ, ಕರ್ಪೂರವಲ್ಲಿ, ಉದಯ... ಹೀಗೆ, ಏನೇನೋ ವಿಚಿತ್ರ ಹೆಸರು, ಬಣ್ಣ, ಆಕಾರ, ರುಚಿ; ಅಷ್ಟೇ ಅಲ್ಲ, ಬಾಳೆಯಲ್ಲಿ ನೀವು ಯಾವುದನ್ನೇ ಹೆಸರಿಸಿದರೂ ಅದು ಅಲ್ಲಿ ಇರುತ್ತದೆ. ಹಿರಿಯ ಸ್ವಾಮಿಗಳು ವಿಶೇಷ ಆಸ್ಥೆಯಿಂದ ಬೆಳೆಸಿದ್ದ ವಾಟ್‌ಬಾಳೆ, ಕೊಡ್ತಬಾಳೆ, ಪುಟ್ಟಬಾಳೆ, ಮಿಟ್ಲಬಾಳೆ, ಬೂದುಬಾಳೆ, ರಸಬಾಳೆ, ಯಾಲಕ್ಕಿಬಾಳೆ, ಕರಿಬಾಳೆ... ಇವೂ ಎಲ್ಲೋ ಮೂಲೆಯಲ್ಲಿ ಹೆಸರಿಗಷ್ಟೆ ಇವೆ.

ಕಾಡಿನ ಅಂಚಿನಲ್ಲಿದ್ದ ಈ ತೋಟಕ್ಕೆ ಪ್ರಾರಂಭದಿಂದಲೂ ಕೋತಿಗಳ ಕಾಟವೆಂದು ಕೆಲಸದವರು ದೂರಿದಾಗ, ಸ್ವಾಮೀಜಿಯವರು ಪ್ರಸನ್ನರಾಗಿಯೇ ಹೇಳುತ್ತಿದ್ದರು: 'ಅಯ್ಯೋ, ನಾವು ಬೆಳೆಯುತ್ತಿರುವುದೇ ಆ ಹನುಮಂತನಿಗಾಗಿ! ಅಂದಮೇಲೆ, ಅವನ ಸಂತಾನವು ಅದನ್ನು ತಿಂದರೆ ಬೇಸರವೇಕೆ, ಸಂತೋಷವಾಗಬೇಕಲ್ಲವೆ?'

ಈಗ ಕಾಲ ಬದಲಾಗಿದೆ; ಹೊಸ ಸ್ವಾಮಿಗಳು ತಮ್ಮ ಹಿರಿಯ ಸ್ವಾಮಿಗಳ ಈ ತರ್ಕವನ್ನು ಆಗಾಗ ತಮಾಷೆ ಮಾಡುವುದುಂಟು. ಇನ್ನು ಶಿಷ್ಯರು ಸುಮ್ಮನಿದ್ದಾರೆಯೇ?

ತೋಟದ ನಿರ್ವಹಣೆಯನ್ನು ಕಂಪನಿಗೆ ಕೊಟ್ಟ ಮೇಲಿಂದ ರಾಜಾರಾಮನ ಉಸ್ತುವಾರಿಯ ಆವಶ್ಯಕತೆಯೇ ಇಲ್ಲ ಅನ್ನುವಷ್ಟು ಕಡಿಮೆಯಾಗಿದೆ. ಸಮವಸ್ತ್ರಧಾರಿ ವಾಚ್‌ಮನ್‌ಗಳಿಬ್ಬರು ಹಗಲು ಮತ್ತು ರಾತ್ರಿ ಪಾಳಿಯಲ್ಲಿ ತೋಟವನ್ನು ಕಾಯುತ್ತಾರೆ. ಅದಕ್ಕೆ ಬೇಕಾದ ಗೊಬ್ಬರ, ಔಷಧೋಪಚಾರಗಳಿಗಾಗಿ ಬೆಂಗಳೂರಿನಿಂದ ತಜ್ಞರು ಬರುತ್ತಾರೆ; ಅದನ್ನೆಲ್ಲಾ ನೋಡಿಕೊಳ್ಳಲು ಒಬ್ಬ ಮ್ಯಾನೇಜರ್ ಹಾಗೂ ಅವನಿಗೊಬ್ಬ ರೈಟರ್ ಕೂಡ ಇದ್ದಾನೆ.

ಸಾಗರದ ಸುತ್ತಮುತ್ತಲ ಸಾವಿರದೆಂಟು ಹಳ್ಳಿಗಳಲ್ಲಿ ಇತ್ತೀಚೆಗೆ ಕೋತಿಗಳ ಕಾಟ ಮಿತಿ ಮೀರಿದೆ. ಹಾಗೇ ಅದನ್ನು ನಿಯಂತ್ರಿಸಲು ದಿನಕ್ಕೊಂದು ಪರಿಹಾರವನ್ನೂ ಜನರು ಕಂಡುಕೊಳ್ಳುತ್ತಿದ್ದಾರೆ. 'ಪಿವಿಸಿ' ಕೊಳವೆಯಿಂದ ಮಾಡಿದ ಹುಸಿಕೋವಿ; ವಿಚಿತ್ರ ಸದ್ದು ಹೊರಡಿಸಿ, ಕೋತಿಗಳಿಗೆ ಕಿರಿಕಿರಿ ಮಾಡುವ ಹಮ್ಮಿಂಗ್ ಬಾಕ್ಸ್; ಪ್ರಖರವಾದ ಬೆಳಕನ್ನು ಹೊಮ್ಮಿಸಿ ಕಣ್ಣು ಕತ್ತಲೆಗೊಳಿಸುವ ಸಣ್ಣ ಎಲ್‌ಇಡಿ ಬಲ್ಬುಗಳ ಟಾರ್ಚ್; ಹಲವು ಮಾದರಿಯ ಪಟಾಕಿ ಗರ್ನಾಲುಗಳು... ಒಂದೊಂದು ಊರಿನಲ್ಲಿ ಒಂದೊಂದು ವಿಧಾನ... ಎಲ್ಲವೂ ಒಂದೆರಡು ವಾರ ಅಷ್ಟೆ; ಆಮೇಲೆ ಕೋತಿಗಳು ಎಂದಿನಂತೆ ಹಾಜರ್! ಕೆಲವು ಊರಿನವರು ಇನ್ನೂ ಒಂದು ದುಬಾರಿ ಪರಿಹಾರವನ್ನೂ ಕಂಡುಕೊಂಡಿದ್ದಾರೆ; ಶ್ರೀಮಠದವರೂ ಮೊದಲು ಅನುಸರಿಸಿದ್ದು ಅದೇ ಮಾರ್ಗವನ್ನು.

ಯಾವುದೋ ವಿಚಿತ್ರ ಭಾಷೆ ಮಾತನಾಡುವ ಅಲೆಮಾರಿಗಳನ್ನು ಕಟ್ಟಿಕೊಂಡು ಬಂದ ಒಬ್ಬ ವ್ಯಕ್ತಿ, ಮಂಗಗಳನ್ನು ತಾನು ಹಿಡಿದು ಕೊಡುತ್ತೇನೆಂದೂ, ಮುಂಗಡ ಪೈಸೆಯೂ ಬೇಡ, ಆದರೆ ಕೊನೆಗೆ ಬಾಲವೊಂದಕ್ಕೆ 400 ರೂಪಾಯಿ ಎಂಬ ಶರತ್ತು ಹಾಕುತ್ತಿದ್ದ. ಅವನು ಮಂಗಗಳನ್ನು ಹಿಡಿಯುತ್ತಿದ್ದ ವಿಧಾನವಂತೂ ಯಾರಲ್ಲೂ ಅಚ್ಚರಿಯನ್ನು ಮೂಡಿಸುವಂಥದ್ದು.

ಕಬ್ಬಿಣದ ಜಾಲರಿಯಂತಹ ಬೋನು; ಅದರಲ್ಲಿ ಮೂರು ಖಾನೆಗಳು; ಮೊದಲನೆಯ ವಿಶಾಲವಾದ ಖಾನೆಯಲ್ಲಿ ಒಂದಿಷ್ಟು ಬಾಳೆ ಹಣ್ಣು, ಮಂಡಕ್ಕಿ ಬೆಲ್ಲದ ಉಂಡೆಯಂತಹ ಆಮಿಷ; ಅದರ ಆಸೆಗೆ ಕೋತಿಗಳು ತೆರೆದ ಬಾಗಿಲಿನಿಂದ ಬೋನಿನ ಒಳಗೆ ಬರುತ್ತವೆ; ಅದರ ಬಾಗಿಲನ್ನು ಎತ್ತಿ ಕಟ್ಟಿದ ಸಣ್ಣ ತಂತಿಯೊಂದನ್ನು ದೂರದಲ್ಲಿ ಅಡಗಿ ಕುಳಿತ ವ್ಯಕ್ತಿಯೊಬ್ಬ ಸಡಿಲಬಿಡುತ್ತಾನೆ; ಬೋನಿನ ಬಾಗಿಲು 'ಪಟ್' ಎಂದು ಹಾಕಿಕೊಳ್ಳುತ್ತದೆ; ಒಳಗೆ ಸಿಕ್ಕಿಬಿದ್ದ ಮಂಗಗಳು, ಪಕ್ಕದ ಖಾನೆಗೆ ಹೋಗುತ್ತವೆ; ಅಲ್ಲಿಂದ ಮತ್ತೊಂದಕ್ಕೆ... ಹೀಗೆ ಎಲ್ಲಾ ಕೋತಿಗಳು ಒಳಗೆ ಸಿಕ್ಕಿಹಾಕಿಕೊಳ್ಳುತ್ತಲೇ ಬೋನಿನ ಮಾಲೀಕನು ಎಚ್ಚರದಿಂದ ಎಲ್ಲಾ ಕೋತಿಗಳನ್ನೂ, ಅವುಗಳ